# ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶ ’24

2024ರ ಫೆಬ್ರವರಿ 24 ಮತ್ತು 25

ಅರಮನೆ ಮೈದಾನ ಬೆಂಗಳೂರು

**“ನಾವು, ನಮ್ಮ ಕಛೇರಿ / ಸಂಸ್ಥೆಯಲ್ಲಿ ಪ್ರತಿಯೊಬ್ಬರು, ಈ ಮೂಲಕ ನಮ್ಮ ಕೆಲಸ ಮತ್ತು ಜೀವನದಲ್ಲಿ ಸಂವಿಧಾನದ ಪೀಠಿಕೆಯನ್ನು ಅತ್ಯಂತ ಪ್ರಾಮಾಣಿಕವಾಗಿ ಪಾಲಿಸುವಲ್ಲಿ ಬದ್ಧರಾಗಿರಲು ಪ್ರತಿಜ್ಞೆ ಮಾಡುತ್ತೇವೆ”**

# ಭಾರತದ ಸಂವಿಧಾನ

## ಪ್ರಸ್ತಾವನೆ

**ಭಾರತದ ಜನಗಳಾದ ನಾವು**
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:
**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;**
**ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು**
**ಉಪಾಸನಾ ಸ್ವಾತಂತ್ರ್ಯ;**
**ಸ್ಥಾನಮಾನ ಹಾಗೂ ಅವಕಾಶ ಸಮಾನತೆ**
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
**ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
**ನಮ್ಮ ಸಂವಿಧಾನ ಸಭೆಯಲ್ಲಿ**
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,**
**ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

# ಭಾರತದ ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶ 2024

ಭಾರತವು ಸಂವಿಧಾನವನ್ನು ಅಳವಡಿಸಿಕೊಂಡು 75 ವರ್ಷ ತುಂಬಲಿರುವ ಹಿನ್ನೆಲೆಯಲ್ಲಿ  ಬಹುತ್ವದ ಭಾರತವನ್ನು ಕಟ್ಟುವ ಮತ್ತು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ "ಭಾರತಕ್ಕೆ ಸಂವಿಧಾನವೇ ಮೂಲ ಮಂತ್ರ ಮತ್ತು ಭಾರತೀಯರಿಗೆ ಪ್ರಜಾಪ್ರಭುತ್ವದ ಅನುಷ್ಠಾನವೇ ನಮ್ಮೆಲ್ಲರ ಮುಖ್ಯ ಆಶಯವಾಗಬೇಕು ಎಂಬ ನಂಬಿಕೆಯನ್ನು ಒಪ್ಪಿದ್ದೇವೆ. ಈ ಅರಿವಿನ ಮೂಲಕ ಕರ್ನಾಟಕ ರಾಜ್ಯ ಸರ್ಕಾರವು "ಸಂವಿಧಾನದ ಜಾಗೃತಿ ಜಾಥಾ ಹಾಗೂ ಏಕತೆಯ ಸಮಾವೇಶ 2024"ನ್ನು ಆಯೋಜಿಸಿದೆ. ಸಾಂವಿಧಾನಿಕ ಮೌಲ್ಯಗಳ ಮೂಲಕವೇ ಒಂದು ದೇಶವಾಗಿ ನಮ್ಮನ್ನು ಸಮಗ್ರವಾಗಿ ಗುರುತಿಸಿಕೊಳ್ಳಲು ಈ ಸಮಾವೇಶವು ವೇದಿಕೆಯಾಗಬೇಕು. ಸಂವಿಧಾನದ ಕುರಿತು ಜಾಗೃತಿ ಮೂಡಿಸುವುದು ಸಮಾವೇಶದ ಪ್ರಮುಖ ಉದ್ದೇಶವಾಗಿದೆ. ಅಷ್ಟೇ ಅಲ್ಲ, ಸಂವಿಧಾನದ ಆಶಯಗಳಲ್ಲಿ  ನಮ್ಮ ಹಕ್ಕುಗಳು, ಮೌಲ್ಯಗಳು ಮತ್ತು ಕರ್ತವ್ಯಗಳು ಪರಮೋಚ್ಚವಾಗಿವೆ ಎಂಬುದನ್ನು ನಾಗರೀಕರಿಗೆ ತಿಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಸಂವಿಧಾನವು  ನಮ್ಮ ವೈಯಕ್ತಿಕ,ಆಡಳಿತಾತ್ಮಕ  ಮತ್ತು ಸಾಮಾಜಿಕ ಆಯಾಮಗಳನ್ನು ರೂಪಿಸುವುದರಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದನ್ನು ಮನವರಿಕೆ ಮಾಡುವುದು ಈ ಸಮಾವೇಶದ ಮುಖ್ಯ ಗುರಿಯಾಗಿದೆ. "ಸಂವಿಧಾನ ಜಾಗೃತಿ ಜಾಥಾ" ಕಾರ್ಯಕ್ರಮವು ರಾಜ್ಯಮಟ್ಟದ ಅರಿವನ್ನು ಮೂಡಿಸುವ ಅಭಿಯಾನವಾಗಿದ್ದು  ಅನೇಕ ಪ್ರದರ್ಶನಗಳ ಮೂಲಕ ರಾಜ್ಯದ ಉದ್ದಗಲಕ್ಕೂ ಬಹುಮುಖಿ ಸಾಂಸ್ಕೃತಿಕ ಹಿನ್ನೆಲೆಯ ಬೃಹತ್ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಅರ್ಥಪೂರ್ಣವಾದ ಕಾರ್ಯವಾಗಿದೆ. ಮನೆ ಮನೆಗೂ ಮಾತ್ರವಲ್ಲ ಪ್ರತಿ ಮನ ಮನಗಳಿಗೂ ಅರಿವನ್ನು ಮೂಡಿಸುವ ಆಶಯವನ್ನು ಈ ಸಮಾವೇಶವು ಒಳಗೊಂಡಿದೆ.

## ಸಂವಿಧಾನ ಜಾಗೃತಿ ಅಭಿಯಾನ

- ಕರ್ನಾಟಕದ ಎಲ್ಲ ಜಿಲ್ಲೆ, ತಾಲೋಕುಗಳು ಮತ್ತು ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ, 2024ರ ಜನವರಿ 26ರಂದು ಸಂವಿಧಾನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಗೌರವಾನ್ವಿತ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರು ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ.

- ಜಾಥಾದ ಭಾಗವಾಗಿ ವಿಧಾನಸಭೆಯ ಕ್ಷೇತ್ರಗಳಲ್ಲಿ ಸಂವಿಧಾನದ 'ತಾಯಿಬೇರು' ಎನ್ನಲಾದ ಮುಖ್ಯ ಪೀಠಿಕೆ, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು, ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ನ್ಯಾಯ ಮತ್ತು ಇತರ ಸಾಂವಿಧಾನಿಕ ಮೌಲ್ಯಗಳು, ಬಸವಣ್ಣನವರ ವಚನಗಳು ಹಾಗೂ ಹಲವು ಸಮಾಜ ಸುಧಾರಕರ ಬೋಧನೆಗಳನ್ನು ಸಾರುವ ಸ್ತಬ್ಧಚಿತ್ರಗಳು, ಹಾಡು, ಲಾವಣಿ ಮತ್ತು ನಾಟಕ ಪ್ರದರ್ಶನಗಳು, ಕಿರುಚಿತ್ರಗಳ ಮೂಲಕ ಸಂವಿಧಾನದ ಕುರಿತು ಜಾಗೃತಿ ಮೂಡಿಸಲಾಗಿದೆ. ಭಾರತದ ಬಹುಮುಖತೆಯ ಮತ್ತು ಐಕ್ಯತೆಯ ಸರ್ವಾಂಗೀಣ ಬದುಕಿನ ಮೌಲ್ಯಗಳನ್ನು ಬೆಳೆಸುವ ಅಗತ್ಯವೂ ಆಗಿದೆ ಎಂಬುದನ್ನು ದೃಡಪಡಿಸುವುದಾಗಿದೆ.

- ಕರ್ನಾಟಕದ ಸಾಂಸ್ಕೃತಿಕ ಹಿರಿಮೆಯನ್ನು ಸಾರುವ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸುವ ದಿಸೆಯಲ್ಲಿ ಸ್ತಬ್ಧಚಿತ್ರಗಳ ಮೆರವಣಿಗೆ ಮಾಡಲಾಗಿದೆ. ಇಲ್ಲಿ ಮಕ್ಕಳು ಸಾರ್ವಜನಿಕರು ಸಮಾಜದ ಸಮಸ್ತರು ಕೂಡಿ ನಡೆಸಿರುವ ಅಭಿಯಾನವಾಗಿ ಮುಂದುವರೆದಿದೆ.

• ಸಮಾಜದ ಹಲವು ಗಣ್ಯರನ್ನು ಒಳಗೊಂಡು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಜಾಥಾ ಕೈಗೊಳ್ಳಲಾಗಿದೆ. ಭಾರತದ ಏಕತೆ ಹಾಗೂ ವಿವಿದತೆಯ ಕುರಿತು ಜಾಗೃತಿ ಮೂಡಿಸುವ ಜೊತೆಗೆ ಜಾಥಾವು ನೀತಿ ನಿರೂಪಕರು, ಸರ್ಕಾರಿ ಅಧಿಕಾರಿಗಳು ಹಾಗೂ ಸಮಾಜದ ಗಣ್ಯರು ಕೂಡ ಜಾಥಾದಲ್ಲಿ ಪಾಲ್ಗೊಂಡು ನಮ್ಮ ಗುರಿ ಸಾಧನೆಗೆ ಕೈ ಜೋಡಿಸಿದ್ದು ವಿಶೇಷವಾಗಿದೆ.






## ಸಂವಿಧಾನ ಸಮಾವೇಶ ಹಾಗೂ ಸಾಂಸ್ಕೃತಿಕ ಪ್ರದರ್ಶನಗಳು:

• ಸಾಂವಿಧಾನಿಕ ನ್ಯಾಯ ಪರಿಕಲ್ಪನೆ, ಅದರಲ್ಲಿಯು ವಿಶೇಷವಾಗಿ ಭಾರತದ ಆಡಳಿತ ರಚನೆ, ಅದರ ಜಾರಿ, ಅಧಿಕಾರದ ವಿಂಗಡಣೆ, ಸಾಂವಿಧಾನಿಕ ಸಂಸ್ಥೆಗಳ ಸ್ವಾತಂತ್ರ್ಯ, ಜನರ ಕಲ್ಯಾಣ ಹಾಗೂ ದೃಢ ಪರಿವರ್ತನಾ ಕಾರ್ಯಚಟುವಟಿಕೆಗಳಿಗೆ  ಸಮಾನತೆಯ ಸಂದೇಶವನ್ನು ಸಾರುವ ಹಾಗು ಎತ್ತಿ ಹಿಡಿಯುವ ಈ ಸಮಾವೇಶವು 'ಸಂವಿಧಾನವು ಭಾರತದ ಪ್ರತಿಬಿಂಬವಾಗಿದೆ' ಎಂಬ ನಂಬಿಕೆಯನ್ನು ಬಲಪಡಿಸುತ್ತದೆ.

• ಈ ಸಮಾವೇಶದ ಹೆಜ್ಜೆಗಳಲ್ಲಿಯೂ ದೇಶದ ಮತ್ತು ರಾಜ್ಯದ  ಪ್ರಮುಖ ಶಿಕ್ಷಣ ತಜ್ಞರು, ಸಾಮಾಜಿಕ ಹೋರಾಟಗಾರರು, ವೃತ್ತಿಪರರು, ಸಮುದಾಯಗಳ ನಾಯಕರು ಹಾಗೂ ನೀತಿ ನಿರೂಪಕರು ಕೂಡ ಸಮಾವೇಶದಲ್ಲಿ ಪಾಲ್ಗೊಳ್ಳಲು ವೇದಿಕೆಗಳನ್ನು ಕಲ್ಪಿಸಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವುದು, ಈ ನೆಲದ ಕಾನೂನಿಗೆ ಗೌರವ ನೀಡುವುದು, ಹಕ್ಕುಗಳ ರಕ್ಷಣೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಪರ್ಕಲ್ಪನೆಗಲ್ಲನು ಅಳವಡಿಸುವ ಮೂಲಕ ಸಂವಿಧಾನ ಆಶಯಗಳನ್ನ ಗಟ್ಟಿಗೊಳಿಸುವುದು ಹಾಗೂ ಸಾಂವಿಧಾನಿಕ ಸಂಸ್ಥೆಗಳ ರಕ್ಷಣೆ ಕುರಿತು ಜನಸಮುದಾಯಗಳಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ಈ ಸಮಾವೇಶದ ಪಾತ್ರ ಹಿರಿದಾಗಿದೆ.

• ಏಕತೆಯ ಜೊತೆ ಜೊತೆಗೆ ಬಹುತ್ವವನ್ನು ಒಪ್ಪಿರುವ ನಮ್ಮ ಸಂವಿಧಾನವು ಭಾಷೆ , ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಸ್ಮಿತೆಯ ಕುರಿತ ನಮಗಿರುವ ಸವಾಲುಗಳನ್ನು ಎದುರಿಸುವ, ಆಧುನಿಕೋತ್ತರ ಹೊಸ ಅನುಷ್ಠಾನಗಳ ಮೂಲಕ ಪರಿಹಾರ ಕಂಡುಕೊಳ್ಳಲು ಈ ಸಮಾವೇಶವು ಏಣಿಯಾಗಲಿದೆ. ಅಷ್ಟೇ ಅಲ್ಲ, ವೈವಿಧ್ಯತೆಯಲ್ಲೂ ಏಕತೆಯನ್ನು ಪ್ರತಿಪಾದಿಸುವ, ಅದೇ ತತ್ವವನ್ನು ಪ್ರತಿಯೊಬ್ಬರ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರೇರಣೆ ಈ ಸಮಾವೇಶದ ಮೂಲ ಆಶಯವಾಗಿದೆ. 'ಹಳೆ ಬೇರು ಹೊಸ ಚಿಗುರು' ಪರಿಕಲ್ಪನೆಯು ತಲೆಮಾರುಗಳ ನಡುವಿನ ಅಂತರಗಳನ್ನು ಮರುಶೋಧಿಸಿ ಶೋಧನೆಯ ಆಗತ್ಯವು ಆಗಿದೆ. ಮತ್ತು ಮರು ರೂಪಿಸುವ ಕೆಲಸಗಳು ಆಗಿವೆ. ಮತ್ತು ಈ ನಿಟ್ಟಿನಲ್ಲಿ ಹೊಸಾ ದೃಷ್ಟಿಕೋನಗಳನ್ನು ಕಟ್ಟಿಕೊಳ್ಳಲು ದಾರಿಗಳನ್ನು ರೂಪಿಸುವ ನಂಬಿಕೆಯೂ ಆಗಿದೆ.

• ವರ್ತಮಾನದ ಸಮಸ್ಯೆಗಳಿಗೆ ಕನ್ನಡಿ ಹಿಡಿಯುವ, ಅವುಗಳನ್ನು ಬಗೆಹರಿಸಲು ಸಮಾವೇಶವನ್ನು ವೇದಿಕೆಯಾಗಿ ಬಳಸಿಕೊಳ್ಳಲಾಗುತ್ತಿದೆ. ಅದರಲ್ಲೂ, ಆರ್ಥಿಕ ಅಸಮಾನತೆ, ಸಾಮಾಜಿಕ ಭೇದ-ಭಾವ, ಆಡಳಿತಾತ್ಮಕ ಸವಾಲುಗಳ ಮೇಲೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ ಇವುಗಳ ಜತೆಗೆ ಅತ್ಯುತ್ತಮ ಮಾದರಿಗಳು, ನಾವೀನ್ಯತೆ ತುಂಬಿದ ವಿಚಾರಗಳು, ಸಾಂಸ್ಥಿಕ ಸಮಸ್ಯೆಗಳಿಗೆ ಪರಿಹಾರಗಳು, ಭಾರತ ಮತ್ತು ಜಾಗತಿಕ ಸಮಸ್ಯೆಗಳಿಗೆ ಎಲ್ಲರೂ ಒಗ್ಗೂಡಿ ಕಂಡುಕೊಳ್ಳಬಹುದಾದ ಪರಿಹಾರಗಳಿಗೂ ಮುಕ್ತ ಅವಕಾಶ ನೀಡಲಾಗಿದೆ. ವಿಶ್ವ ವ್ಯಾಪಾರ ನೀತಿಯಿಂದಾಗಿ ವೈಯಕ್ತಿಕ ಬದುಕುಗಳು ನಂಬಿಕೆಗಳು ಮಾನವ ಸಮಾಜದ ಹೊಸ ಆಶೋತ್ತರಗಳು ವ್ಯಾಪಾರದ ಸರಕುಗಳಾಗಿ ಮಾರ್ಪಟ್ಟು ಹೊಸ ಪೀಳಿಗೆಯ ಜನ ಕಂಗಾಲಾಗಿ ಕೇವಲ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ಸವಾಲುಗಳನ್ನು ಎದುರಿಸುವುದು ಮಾತ್ರವಲ್ಲ, ಇಂದು ಹೊಸ ತಲೆಮಾರು ಸಾಂಸ್ಕೃತಿಕ ಬಿಕ್ಕಟ್ಟುಗಳಿಗೆ ಕಾಲಿಡುತ್ತಾ ಹೊಸ ಬಿಕ್ಕಟ್ಟುಗಳಿಗೆ ತುರ್ತಾಗಿ ವೈಚಾರಿಕ, ವೈಜ್ಞಾನಿಕ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ಅಡಿಯಲ್ಲಿ ಹೊಸ ದೃಷ್ಟಿಕೋನಗಳನ್ನು ಬೆಳಸಿಕೊಳ್ಳಬೇಕಾದ ತುರ್ತು ಅಗತ್ಯವೂ ಇದಾಗಿದೆ. ಈ ಸಂದರ್ಭದಲ್ಲಿ ಹೊಸ ಮಾನವತಾವಾದದ ಜೊತೆಗೆ ಕೂಡಿ ಬದುಕುವ ಹೊಸ ಸಂಸ್ಕೃತಿಯನ್ನು ಕಟ್ಟಿ ಬೆಳೆಸುವ ತುರ್ತು ಅಗತ್ವವೂ ನಮ್ಮೆಲ್ಲರದಾಗಿದೆ. ಈ ತುರ್ತು ಅಗತ್ಯದ ಕರೆಗೆ ಈ ಏಕತಾ ಸಮಾವೇಶವೂ ಧ್ವನಿ ಕೊಡುತ್ತಲಿದೆ ಎಂಬುದು ಸಂವಿಧಾನದ ಅನುಷ್ಠಾನದ ಮುಖ್ಯ ಆಶಯವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಮಾಜ ಕಲ್ಯಾಣ ಇಲಾಖೆ ಮತ್ತು ಬೆಂಗಳೂರಿನ ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ (ಎನ್‌ಎಲ್‌ಎಸ್‌ಐಯು), ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಅಂಡ್ ಎಕನಾಮಿಕ್ ಚೇಂಜ್ (ಐಎಸ್‌ಇಸಿ), ಬೆಂಗಳೂರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ಕೆ ಸ್ ಲ್ ಯು), ಹುಬ್ಬಳ್ಳಿ ಈ ಸಂಸ್ಥೆಗಳ ಸಹಯೋಜಕತ್ವದಡಿಯಲ್ಲಿ ಈ ಸಮಿತಿಗಳು ರಚನೆಯಾಗಿವೆ ಮತ್ತು ಈ ಸಮಿತಿಗಳ ಮೂಲಕ ಸಂವಿಧಾನದ ಆಶಯಗಳ ಅನುಷ್ಠಾನ, ಸರ್ವ ಸಮಾಜದ ಐಕ್ಯತೆಯನ್ನು, ಅಭಿವದ್ಧಿಯನ್ನು ಮತ್ತು ಪ್ರಜಾತಂತ್ರದ ಆಶಯವನ್ನು ಬಲಪಡಿಸುವ ನಿಟ್ಟಿನಲ್ಲಿ ವಿಷಯಗಳ ಆಯ್ಕೆ, ಬಹಿರಂಗ ವೇದಿಕೆಗಳ ಅಧಿವೇಷನಗಳನ್ನು ರೂಪಿಸಲಾಗಿದೆ.

## ವಿಷಯ 1: ಭಾರತದ ಸಂವಿಧಾನಕ್ಕೆ 75 ವರ್ಷ

• ಜಗತ್ತಿನ ಬೃಹತ್ ಪ್ರಜಾತಂತ್ರ ವ್ಯವಸ್ಥೆಯ ಭಾರತದಲ್ಲಿ 'ಸಂವಿಧಾನ ಹಾಗೂ ರಾಷ್ಟ್ರೀಯ ಏಕತಾ' ಸಮಾವೇಶದ ಮೊದಲನೇ ವಿಷಯವು ಆಧುನಿಕ ಭಾರತದ ಚರಿತ್ರೆಯು ಸಂವಿಧಾನವನ್ನು ಅಂಗೀಕರಿಸಿದ್ದು ಮಾತ್ರವಲ್ಲ ಈ ಶತಮಾನದ ನಡೆಯಲ್ಲಿ ತನ್ನ ಗುರಿಗಳನ್ನು ವರ್ಷದಲ್ಲಿ ಸಾಧಿಸಿದ ಬಗೆ ಹೇಗೆ? ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಹಾಗೆಯೇ, ಕಾಲಾಂತರದಲ್ಲಿ ಉದ್ಭವಿಸಿದ ಹೊಸ ಸವಾಲುಗಳನ್ನು ಹೇಗೆ ಬಗೆಹರಿಸಿತು ಎಂಬುದರ ಮೇಲೆ ಕೇಂದ್ರೀಕೃತವಾಗಿದೆ. ಪ್ರಜಾತಂತ್ರದ ಬೇರುಗಳನ್ನು ಬಲಪಡಿಸಿದ ಬಗೆ ಹೇಗೆ ಎಂಬುದು ಬಹು ಮುಖ್ಯವಾದ ಚಾರಿತ್ರಿಕ ದಾಖಲೆಯಾಗಿದೆ.

• ಸಂವಿಧಾನವು ಭಾರತದ ಪ್ರಜಾಪ್ರಭುತ್ವದ ಮರುಸ್ಥಾಪನೆಯೊಂದಿಗೆ ಬೆಳೆದುಬಂದ ಚರಿತ್ರೆ ಮತ್ತು ಹೊಸ ಚಾರಿತ್ರಿಕ ದಾಖಲೆಗಳ ಮರು ಶೋಧನೆಯೂ ಇದಾಗಿದೆ. ದೇಶ ಎದುರಿಸ ಹೊಸ ಜಾಗತಿಕ ಮತ್ತು ಆಂತರಿಕ ಸವಾಲುಗಳಿಗೆ ಉತ್ತರರೂಪವಾಗಿ ನಡೆಸಿದ ಪ್ರಯತ್ನಗಳನ್ನು ಅದರ ಸೋಲು ಗೆಲುವುಗಳನ್ನು ಇಲ್ಲಿ ನಾಲ್ಕು ವೇದಿಕೆಗಳಲ್ಲಿ ಪ್ರಯಾಯ ವೇದಿಕೆಗಳಲ್ಲಿ ನಾಲ್ಕು ವಿಷಯಾಧಾರಿತ ತಂಡಗಳಲ್ಲಿ ಸಂವಾದಗಳು ನಡೆಯಲಿವೆ. ಈ ಸಂವಾದಗಳು ವರ್ತಮಾನದ ವಿಷಯ ವಸ್ತುಗಳ ಮೇಲೆ ಬೆಳಕು ಚೆಲ್ಲಲಿದ್ದು, ಪ್ರತಿಯೊಂದು ವೇದಿಕೆ ಮತ್ತು ತಂಡವೂ ಕೂಡ ಭಾರತ ಸಂವಿಧಾನದ ಪ್ರತಿಯೊಂದು ಎಳೆಯನ್ನು, ನಿಲುವುಗಳನ್ನು ಬಿಚ್ಚಿಡುತ್ತದೆ. 21ನೇ ಶತಮಾನದಲ್ಲಿ ಸಾಂವಿಧಾನಿಕತೆ ಹಾಗೂ ಪ್ರಜಾಪ್ರಭುತ್ವ; ಸಮಾನತೆ ಹಾಗೂ ನ್ಯಾಯದ ಖಾತರಿ; ಭಾರತದ ಒಕ್ಕೂಟ ವ್ಯವಸ್ಥೆಯನ್ನು ಎತ್ತಿಹಿಡಿಯುವುದು, ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸಾಂಸ್ಥಿಕ ಒಗ್ಗಟ್ಟು ಹಾಗೂ ಕೊನೆಯದಾಗಿ ಸಾಂವಿಧಾನಿಕ ಸಂಸ್ಕೃತಿ ಹಾಗೂ ಸಾಕ್ಷಿಪ್ರಜ್ಞೆಯನ್ನು ಮೂಡಿಸುವುದು ಈ ಸಂವಾದಗಳ ಆಶಯವಾಗಿವೆ.

• ಮೊದಲನೆ ವಿಷಯದ ಕುರಿತು ಮಾತನಾಡುವವರಲ್ಲಿ ವಿವಿಧ ಕ್ಷೇತ್ರಗಳ ತಜ್ಞರು ಮತ್ತು ನೀತಿ ನಿರೂಪಕರು ಪಾಲ್ಗೊಳಲಿಧಾರೆ. ಆಡಳಿತ ಹಾಗೂ ನಾಗರಿಕ ಸಮಾಜದಲ್ಲಿ ತಮ್ಮ ಸಂಶೋಧನೆ, ಪರಿಣಿತಿ ಹಾಗೂ ಅನುಭವವನ್ನು ಬಳಸಿಕೊಂಡು ಫಲಪ್ರದವಾದ ಚರ್ಚೆ ಹಾಗೂ ಸಂವಾದ ನಡೆಸಲಿದ್ದಾರೆ. ಭಾರತ ಸಂವಿಧಾನದ ರಚನೆಯ ಕಾಲಘಟ್ಟ ಎದುರಿಸಿದ ಸವಾಲುಗಳು ಮಾತ್ರವಲ್ಲ ಸಮಕಾಲೀನ ಸಮಾಜದಸವಾಲುಗಳು ಮತ್ತು ಇಲ್ಲಿರುವ ಸಂಕೀರ್ಣತೆಗಳನ್ನು ಬಿಡಿಸುವ ಹಾಗೂ ಸಾಂವಿಧಾನಿಕ ಭವಿಷ್ಯವನ್ನು ಭದ್ರಗೊಳಿಸಲು ಅಗತ್ಯವಾದ ಮಾರ್ಗಸೂಚಿ ತಯಾರಿಸಲಿದ್ದಾರೆ.

## ವಿಷಯ 2: ಸಂವಿಧಾನ, ಕಲ್ಯಾಣ ಹಾಗೂ ಅಭಿವೃದ್ಧಿ

- ಸಂವಿಧಾನದ ಮೂಲ ಉದ್ದೇಶ ಸರ್ವಾಂಗೀಣ ಬಲಿಷ್ಠ ಸಾರ್ವಭೌಮತ್ವದ ರಾಷ್ಟ್ರ ನಿರ್ಮಾಣವೇ ಆಗಿದ್ದು ಈ ವಿಷಯಗಳ ಕುರಿತು ಸಂವಾಧಗಳು ನಡೆಯಲಿವೆ.
- ಎರಡನೇ ಸಮಿತಿಯು ಕೂಡ ಅನೇಕ ವಿಷಯ ಮತ್ತು ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತದೆ. ಮೊದಲನೆ ಸಮಿತಿಯು ಆದಾಯ ಹಾಗೂ ಸಂಪತ್ತಿನ ಹಂಚಿಕೆ, ಉದ್ಯೋಗಾವಕಾಶಗಳು, ಶೈಕ್ಷಣಿಕ ಕ್ಷೇತ್ರ ಹಾಗೂ ಸರ್ಕಾರಿ ಮತ್ತು ಖಾಸಗಿ ವಲಯಗಳಿಗೆ ಒತ್ತು ನೀಡುತ್ತದೆ.
- ಎರಡನೇ ಸಮಿತಿಯು ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಹಾಗೂ ಪೌರತ್ವದ ಮೇಲೆ ಕೇಂದ್ರೀಕೃತವಾಗಿದೆ.
- ಮೂರನೇ ಸಮಿತಿಯು ಸಾಮಾಜಿಕ ಮತ್ತು ಆರ್ಥಿಕ ನ್ಯಾಯ, ಸಾಮಾಜಿಕ ಸಮಾನತೆ, ಆರೋಗ್ಯ ಮತ್ತು ಪೌಷ್ಟಿಕತೆ ಹಾಗೂ ನಾಗರಿಕ ಸೌಕರ್ಯಗಳ ವಿತರಣೆಯಲ್ಲಿ ಸುಧಾರಣೆಯನ್ನು ಬಯಸುತ್ತದೆ.
- ನಾಲ್ಕನೇ ಸಮಿತಿಯು ಭಾರತದ ಆದಾಯ, ವೈಯಕ್ತಿಕ ಆದಾಯ ಹೆಚ್ಚಳ ಹಾಗೂ ಆದಾಯದ ಅಸಮಾನತೆ ನಿರ್ಮೂಲನೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಗಮನಹರಿಸುತ್ತದೆ.
- ಐದನೇ ಅಥವಾ ಕೊನೆಯ ಸಮಿತಿಯು ಎಸ್ಸಿ, ಎಸ್ಟಿ, ಒಬಿಸಿ, ಮಹಿಳೆಯರು ಹಾಗೂ ಅಲ್ಪಸಂಖ್ಯಾತರ ಆರ್ಥಿಕ ಹಿಂದುಳಿಯುವಿಕೆಯನ್ನು ಹಿಮ್ಮೆಟ್ಟಲು ಸರ್ಕಾರಗಳು ಯಾವ ರೀತಿ ಕಾರ್ಯನಿರ್ವಹಿಸಿವೆ ಎಂಬುದರ ಮೇಲೆ ಬೆಳಕು ಚೆಲ್ಲಲಿದೆ.

## ವಿಷಯ 3: ಕರ್ನಾಟಕದಲ್ಲಿ ಅಭಿವೃದ್ಧಿ ಮಾದರಿಗಳು

- ಮೊದಲನೆ ಸಮಿತಿಯು ಸಂವಿಧಾನದ ಮಾರ್ಗದರ್ಶನದಲ್ಲಿ ಅಭಿವೃದ್ಧಿ ಹಾಗೂ ಪ್ರಗತಿಯ ಸಾಧನೆ ಮೇಲೆ ಗಮನ ಹರಿಸುತ್ತದೆ. ನಮ್ಮ ಸಂವಿಧಾನದ ಅಡಿಯಲ್ಲಿ ಜಟಿಲವಾದ ಅಭಿವೃದ್ಧಿಯ ಜಾಲವನ್ನು ವಿಶೇಷ ಗಮನದ ಮೂಲಕ ಕರ್ನಾಟಕದಲ್ಲಿ ಹೇಗೆ ಪರಿಣಾಮ ಬೀರಿದೆ ಎಂಬುದು ಪ್ರಮುಖ ಸಂವಾದವಾಗಿದೆ. ಇದರ ಅನ್ವಯ, ಭೂಮಾಲೀಕತ್ವ, ರಾಜ್ಯದಲ್ಲಿ ಉದ್ಯೋಗ ಸೃಷ್ಟಿ ವಿಷಯಗಳ ಮೇಲೆ ಚರ್ಚಿಸಲಾಗುತ್ತದೆ.
- ಎರಡನೇ ಸಮಿತಿಯು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್ಸಿಎಸ್ಪಿ) ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆ (ಎಸ್ಟಿಪಿ) ಜಾರಿಯ ಮೇಲೆ ಹೆಚ್ಚು ಗಮನ ಹರಿಸುತ್ತದೆ. ಇದು ಹಣದ ವಿನಿಯೋಗ, ಆರ್ಥಿಕ ಸಬಲೀಕರಣಕ್ಕೆ ಯೋಜನೆಗಳ ಪರಿಣಾಮವನ್ನು ಪರಿಶೀಲಿಸುತ್ತದೆ.
- ಮೂರನೇ ಸಮಿತಿಯು ಕರ್ನಾಟಕ ಸರ್ಕಾರ ಜಾರಿಗೆ ತಂದ ಐದು ಗ್ಯಾರಂಟಿ ಯೋಜನೆಗಳ ಕುರಿತು ವಿವರವಾದ ಚರ್ಚೆ ನಡೆಸುತ್ತದೆ. ಐದು ಗ್ಯಾರಂಟಿಗಳು ಹಾಗೂ ಸಾರ್ವತ್ರಿಕ ಮೂಲ ಆದಾಯವು ನೀತಿಗಳಾಗಿ ರಾಜ್ಯದಲ್ಲಿ ಹೇಗೆ ಆದಾಯದ ಅಸಮಾನತೆಯನ್ನು ಕಡಿಮೆಯಾಗಿದೆ, ಹಣದುಬ್ಬರದಿಂದಾಗಿ ಜೀವನ ವೆಚ್ಚ ತಗ್ಗಿದ, ಹಣಕಾಸು ನೆರವು ಹಾಗೂ ಮಹಿಳೆಯರ ಸಸಬಲೀಕರಣದ ಕುರಿತು ಚರ್ಚೆ ನಡೆಯಲಿದೆ. ಇಂತಹ ಚರ್ಚೆಗಳು ನೀತಿಗಳ ಮೂಲಕ ಹೇಗೆ ನಾಗರಿಕರ ಕ್ಷೇಮಾಭಿವೃದ್ಧಿಯನ್ನು ದೃಢಪಡಿಸಿದವು ಎಂಬುದನ್ನು ಅರಿತುಕೊಳ್ಳಲು ನೆರವಾಗುತ್ತವೆ.
- ನಾಲ್ಕನೇ ಸಮಿತಿಯು ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಇತರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತ ಸಮುದಾಯಗಳು, ಹಾಗೂ ಮಹಿಳೆಯರ ಪರಿಸ್ಥಿತಿ ಸುಧಾರಣೆ, ಆರ್ಥಿಕ ಸುಧಾರಣೆ ಮತ್ತು ಜಾತಿಗಣತಿ ಮೂಲಕ ಸರ್ವರ ಏಳಿಗೆಗಾಗಿ ನೀತಿ ನಿರೂಪಣೆ ಕುರಿತು ಚರ್ಚಿಸಲಿದೆ.
- ಐದನೇ ಸಮಿತಿಯು, ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯದ ಹೆಜ್ಜೆಗುರುತು, ಸಮಾಜ ಸುಧಾರಕರು, ದೂರದೃಷ್ಟಿಯ ಅರಸರು ಮತ್ತು ನಾಯಕರು ಸಾಮಾಜಿಕ-ಸಾಂಸ್ಕೃತಿಕ ರಾಜ್ಯವಾಗಿ ರೂಪಿಸುವಲ್ಲಿ ಯಾವ ರೀತಿ ಪರಿಣಾಮ ಬೀರಿದರು ಎಂಬುದರ ಮೇಲೆ ಗಮನ ಹರಿಸುತ್ತದೆ. ಅಲ್ಲದೆ, ಕರ್ನಾಟಕದಲ್ಲಿ ಜಾತಿ ಹಾಗೂ ದಲಿತರ ಹಕ್ಕುಗಳ ಸಾಮಾಜಿಕ ಚಳವಳಿಗೆ ಸಂಬಂಧಿಸಿದಂತೆಯೂ ಚರ್ಚೆ ನಡೆಯಲಿದೆ.

## ವಿಷಯ 4: ಪ್ರಜಾಪ್ರಭುತ್ವ ಹಾಗೂ ಬಹುತ್ವದ ಕರ್ನಾಟಕ

- ಮೊದಲನೆಯ ದಿನದಂದು " ಪ್ರಜಾಪ್ರಭುತ್ವ ಮತ್ತು ಬಹುತ್ವದ ನಡೆ" ಮತ್ತು ಎರಡನೆಯ ದಿನ " ಸಂವಿದಾನವನ್ನು ನಂಬಿ..." ಎಂಬ ಆಶಯಗಳನ್ನು ಚರ್ಚಿಸಲಾಗುತ್ತದೆ. ರಾಷ್ಟ್ರ ಮತ್ತು ರಾಜ್ಯದ ಅನೇಕ ಹೋರಾಟಗಾರರು, ಸಂಶೋಧಕರು, ವಿವಿಧ ಕ್ಷೇತ್ರಗಳ ಯುವ ಚಿಂತಕರು, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಮಹನೀಯರು ತಮ್ಮ ವಿಚಾರ, ಪ್ರಜಾತಾಂತ್ರಿಕ ಮೌಲ್ಯಗಳನ್ನು ಅನುಭವಗಳನ್ನು ಈ ಸಮಾವೇಶದಲ್ಲಿ ಹಂಚಿಕೊಳ್ಳುತ್ತಿದ್ದಾರೆ.

- ಸಂವಿಧಾನದ ಆಶಯಗಳನ್ನು ಕುರಿತು ತಮ್ಮ ಅಭಿವ್ಯಕ್ತಿಗಳನ್ನು ಮಂಡಿಸುವುದು ಮಾತ್ರವಲ್ಲ ಈ ವೇದಿಕೆಗಳಲ್ಲಿ ಪ್ರಜಾಪ್ರಭುತ್ವದ ಬೇರುಗಳೆಂದು ಪರಿಗಣಿಸಲಾಗಿರುವ ಸಂವಿಧಾನದ ೪ನೇ ಅಧ್ಯಾಯದಲ್ಲಿ ಒದಗಿಸಲಾಗಿರುವ ರಾಜ್ಯ ನೀತಿಯ ನಿರ್ದೇಶಕ ತತ್ವಗಳು, ಮುಖ್ಯವಾಗಿ ಕೇಂದ್ರ ಮತ್ತು ರಾಜ್ಯಗಳ ಒಕ್ಕೂಟ ವ್ಯವಸ್ಥೆಯ ಅಡಿಯಲ್ಲಿ ಭಾರತದ ಉತ್ತರ-ದಕ್ಷಿಣ ಆಲೋಚನೆ, ಭಿನ್ನತೆ ಮತ್ತು ಸವಾಲುಗಳನ್ನು ಕುರಿತು ಚರ್ಚೆಗಳನ್ನು ನಡೆಸಲಾಗುತ್ತಿದೆ.

- ಭಾರತವು ಭಾಷಾ ಆಯಾಮಗಳು ಮತ್ತು ಒಕ್ಕೂಟವ್ಯವಸ್ಥೆ ಎಂಬುದು ಇಲ್ಲಿ ಭಾಷಾನೀತಿಗಳ ಅಡಿಯಲ್ಲಿ ಪ್ರಧಾನ ಮತ್ತು ಅಧೀನ ಭಾಷೆಗಳನ್ನು ಒಪ್ಪಲಾಗದು. ಭಾರತವು ಬಹುಭಾಷಾ, ಬಹುಜಾತಿ, ಬಹು ಸಾಂಸ್ಕೃತಿಕ ವೈವಿಧ್ಯತೆಗಳ ನೆಲವಾಗಿದ್ದು ಸಂವಿಧಾನದ ಆಶಯವಾಗಿ ಭಾಷಾ ಅತಿಕ್ರಮಣತೆಗೆ ಭಿನ್ನವಾಗಿ ಬಹುಭಾಷಾ ವೈವಿಧ್ಯತೆಯನ್ನು ಅವುಗಳ ಅಸ್ಮಿತೆಯನ್ನು ಕಾಪಾಡುವುದು ಹೇಗೆ ಎಂಬ ಪ್ರಶ್ನೆಯೊಂದಿಗೆ ಚರ್ಚೆಗಳು ನಡೆಯಲಿವೆ.

- ಭಾರತ ಪ್ರಧಾನ-ಅಧೀನ ಪರಿಕಲ್ಪನೆಯಲ್ಲಿ ಬಹುತ್ವನೆಲೆಗಳ ರಾಷ್ಟ್ರವಾಗಿದ್ದು ಇಲ್ಲಿನ ಅಭಿವೃದ್ಧಿಯಲ್ಲಿ ಅನೇಕ ಸಮುದಾಯಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳು ಅಸಮಾನತೆಯಿಂದ ಕೂಡಿದೆ. ೭೫ ವರ್ಷಗಳಲ್ಲಿಯೂ ಅನೇಕ ಸಮುದಾಯಗಳು ಅನ್ನ, ಅಕ್ಷರ, ಅಧಿಕಾರ, ಅಸ್ತಿತ್ವ ಮೊದಲಾದ ಮೂಲಭೂತ ಅಗತ್ಯಗಳಿಗಾಗಿ ಸಂಘರ್ಷ ನಡೆಸುತ್ತಿದ್ದು ನಾಗರೀಕನ ಹಕ್ಕುಗಳಿಂದ ವಂಚಿತರಾಗಿ ಬದುಕುತ್ತಿದ್ದು ಈ ಸಬಾಲ್ಟರ್ನ್ ಪರಿಕಲ್ಪಿತ ವಂಚಿತ ಸಮುದಾಯಗಳನ್ನು ಸಂವಿಧಾನದ ಪೀಠಿಕೆಯ ಆಶಯದಂತೆ ರಾಷ್ಟ್ರದ ಮುಖ್ಯಭೂಮಿಕೆಗೆ ಕರೆತರುವುದು ನಮ್ಮೆಲ್ಲರ ಆದ್ಯ ಕರ್ತವ್ಯವೂ ಆಗಿದೆ. ಇಲ್ಲಿ ಈ ವಂಚಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ಕರೆತರುವ ದಾರಿಗಳ ಬಗ್ಗೆ ಚರ್ಚಿಸಲಾಗುತ್ತದೆ.

- ಪ್ರಜಾಪ್ರಭುತ್ವ ಎಂದರೆ ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿ ಮತ್ತು ಹಕ್ಕಿಗೆ ಸಂಬಂಧಿಸಿದ್ದಾಗಿದ್ದು ಅತ್ಯಂತ ಪವಿತ್ರವಾದ ಮತ್ತು ಕರ್ತವ್ಯವೂ ಆಗಿರುವ "ಮತದಾನ" ವ್ಯವಸ್ಥೆಯ ಮೂಲಕವೇ ರಾಷ್ಟ್ರ ನಿರ್ಮಾಣವಾಗಬೇಕಾಗುತ್ತದೆ. ಆದ್ದರಿಂದ ಭಾರತದಲ್ಲಿ ಇನ್ನೂ ಅನೇಕ ಫ್ಯೂಡಲ್ ಮನೋಧರ್ಮ ಅನಕ್ಷರತೆ, ಅಜ್ಞಾನ, ಜಾತೀವಾದ, ಮತೀಯವಾದ ಇನ್ನೂ ಅನೇಕ ಸಮಸ್ಯೆಗಳ ನಡುವೆ ಪ್ರಜಾಪ್ರಭುತ್ವವನ್ನು ಸದೃಡಗೊಳಿಸಲು ಈ ಪ್ರಜೆಗಳ "ಮತದಾನ" ದ ಮಹತ್ವ ಹಾಗೂ ಅರಿವನ್ನು ಮೂಡಿಸುವಲ್ಲಿ ಎಲ್ಲರ ಪಾತ್ರಗಳೇನು ಎಂಬುದರ ಬಗ್ಗೆ ಇಲ್ಲಿ ಚರ್ಚೆಗಳು ನಡೆಯಬೇಕಿದೆ.

- ಹಾಗೂ ಶೇಕಡ ೬೦ರಷ್ಟು ಯುವಜನರು ವಾಸಿಸುತ್ತಿರುವ ಈ ದೇಶದ ಯುವಜನರ ಮೂಲ ಭೂತ ಅಗತ್ಯಗಳಾದ ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ದೇಶದ ಆಗುಹೋಗುಗಳಲ್ಲಿ ಯುವಜನರ ಪಾಲ್ಗೊಳ್ಳುವಿಕೆಯನ್ನು ಗುರುತಿಸಬೇಕಾಗುತ್ತದೆ. ದೇಶದ ಸಮಗ್ರತೆ ಮತ್ತು ಸರ್ವ ಜನಾಂಗಗಳ ಅಭಿವೃದ್ಧಿಯ ರಾಷ್ಟ್ರ ನಿರ್ಮಾಣದಲ್ಲಿ ಯುವ ಜನರ ಪಾತ್ರವನ್ನು ಮತ್ತು ಮುಂದಿನ ಯುವನಾಯಕತ್ವದ ನಿರ್ಮಾಣವನ್ನು ಕುರಿತು ಈ ವೇದಿಕೆಗಳಲ್ಲಿ ಸಂವಾದಗಳನ್ನು ನಡೆಸಲಿದ್ದಾರೆ.

ಇಲ್ಲಿ "ಹಳೆಬೇರು ಮತ್ತು ಹೊಸ ಚಿಗುರು" ಮಾತಿನಂತೆ ಹಿರಿಯರು ಕಿರಿಯರು ತಮ್ಮ ಅನುಭವಗಳನ್ನು ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಈ ಎರಡೂ ದಿನಗಳ ಚರ್ಚೆಗಳು ಕರ್ನಾಟಕದಲ್ಲಿ ಹಾಗೂ ಭಾರತದಲ್ಲಿ ಸಂವಿದಾನದ ಆಶಯವನ್ನು ಎತ್ತಿ ಹಿಡಿಯುವ ಅದನ್ನು ಅರಿವಾಗಿ ಪರಿವರ್ತಿಸಿ ಮುನ್ನಡೆಯಲು ಅಗತ್ಯವಾದ ಪ್ರೇರಣೆಗಳನ್ನು ಬೆಳಸುವ ಕಾರ್ಯಕ್ರಮಗಳಾಗಿ ನಡೆಯಲಿದ್ದು ಎಲ್ಲರ ಅಭಿವೃದ್ಧಿ ರಾಜ್ಯ ಮತ್ತು ದೇಶದ ಅಭಿವೃದ್ಧಿಯೆಂದು ಅರಿಯಬೇಕಾಗಿದೆ. ಇದಕ್ಕಾಗಿಯೇ ರಾಜ್ಯದಾದಂತ ಸಂವಿಧಾನ ಜಾಗೃತಿ ಜಾಥಾವನ್ನು ಹಮ್ಮಿಕೊಂಡಿದ್ದು ಇಡೀ ರಾಜ್ಯ, ತಾಲೋಕುಗಳು, ಗ್ರಾಮಪಂಚಾಯತಿಗಳು ಮತ್ತು ಹಳ್ಳಿಗಳಲ್ಲಿ ಸಂವಿಧಾನದ ಅರಿವನ್ನು ಮೂಡಿಸುವಲ್ಲಿ ಅನೇಕ ಸಾಂಸ್ಕೃತಿಕ, ಸಾಹಿತ್ಯಕ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಅನೇಕ ಮಾಧ್ಯಮಗಳ ಮೂಲಕ ಅರಿವಿನ ಹೆಜ್ಜೆಗಳನ್ನು ಇಡಲಾಗುತ್ತಿದೆ. ಕರ್ನಾಟಕದ ಪ್ರತಿ ನಾಗರೀಕರೂ ಈ ಜಾಗೃತಿ ಜಾಥಾಗಳಲ್ಲಿ ಭಾಗವಹಿಸಿ ರಾಜ್ಯ ಮಾತ್ರವಲ್ಲ ರಾಷ್ಟ್ರದ ಐಕ್ಯತೆಯನ್ನು ಸಂರಕ್ಷಿಸಿಕೊಳ್ಳಲು ದೃಡ ಪ್ರತಿಜ್ಞೆಯನ್ನು ಮಾಡುವ ಅಗತ್ಯವನ್ನು ಮನಗಂಡಿರುತ್ತಾರೆ. ಭಾರತದ ಸಂವಿಧಾನವು ದೇಶದ ಸಮಸ್ತ ಜನರ ಪರಮೋಚ್ಚ ಕಾನೂನುಗಳ ಕೃತಿಯಾಗಿದೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸದೃಡಗೊಳಿಸಲು, ಭಾರತೀಯರ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಕಟ್ಟಿಕೊಳ್ಳಲು, ಬೆಳೆಸಿಕೊಳ್ಳಲು ಮತ್ತು ಈ ದೇಶದ ಸಾರ್ವಭೌಮತೆ, ಸಮಗ್ರತೆಯನ್ನು ಜಗತ್ತಿಗೇ ಸಾರಲು ಈ ಸಂವಿಧಾನದ ಕೃತಿಯೇ ಪ್ರೇರಣೆಯಾಗಿದೆ.

## 24th ಫೆಬ್ರುವರಿ, 2024

| ಸಮಯ | ಸೆಮಿನಾರ್ ಸ್ಥಳ 1<br>ವಿಷಯ-1: ಸಂವಿಧಾನದ 75ನೇ ವರ್ಷ. | ಸೆಮಿನಾರ್ ಸ್ಥಳ 2<br>ವಿಷಯ 2: ಸಂವಿಧಾನ, ಕಲ್ಯಾಣ ಮತ್ತು ಅಭಿವೃದ್ಧಿ. | ಸೆಮಿನಾರ್ ಸ್ಥಳ 3<br>ವಿಷಯ 3: ಕರ್ನಾಟಕದಲ್ಲಿನ ಅಭಿವೃದ್ಧಿಯ ದೃಷ್ಟಿಕೋನ. | ಸೆಮಿನಾರ್ ಸ್ಥಳ 4<br>ವಿಷಯ 4: ಪ್ರಜಾಪ್ರಭುತ್ವ ಮತ್ತು ಎಲ್ಲರನ್ನೂ ಒಳಗೊಂಡ ಕರ್ನಾಟಕ |
|---|---|---|---|---|
| 2:00 pm to 3:00 pm | 21ನೇ ಶತಮಾನದಲ್ಲಿ ಸಾಂವಿಧಾನಿಕತೆ ಮತ್ತು ಪ್ರಜಾಪ್ರಭುತ್ವ.<br>ಪ್ರೊ. ಗೋಪಾಲ್ ಗುರು<br>ಪ್ರೊ. ಸುಧೀರ್ ಕೃಷ್ಣಸ್ವಾಮಿ<br>ಪ್ರೊ. ತರುನಭ್ ಖೈತಾನ್<br>ಪ್ರೊ. ನಂದಿನಿ ಸುಂದರ್ | 75 ವರ್ಷಗಳಲ್ಲಿ ಸಂವಿಧಾನದ ಭರವಸೆಗಳು ಮತ್ತು ಅಭಿವೃದ್ಧಿ ಸಾಧನೆಗಳು.<br>ಪ್ರೊ. ಎಮ್. ವಿ ರಾಜೀವ ಗೌಡ<br>ಪ್ರೊ. ಜಯಂತಿಘೋಷ್<br>ಶ್ರೀ ಅನುರಾಗ್ ಬೆಹರ್<br>ಪ್ರೊ. ಹಿಮಾಂಶು<br>ಪ್ರೊ. ಸುರಿಂದೆರ ಸಿಂಗ್ ಜೋಡ್ಕ | ಸಾಂವಿಧಾನಿಕ ನಿರ್ದೇಶನಗಳು: ಕರ್ನಾಟಕದಲ್ಲಿ ಅಭಿವೃದ್ಧಿ ಮತ್ತು ಪ್ರಗತಿ.<br>ಪ್ರೊ. ಗೋಪಾಲ್ ಗುರು<br>ಪ್ರೊ. ಸುಧೀರ್ ಕೃಷ್ಣಸ್ವಾಮಿ<br>ಪ್ರೊ. ತರುನಭ್ ಖೈತಾನ್<br>ಪ್ರೊ. ನಂದಿನಿ ಸುಂದರ್ | ಒಕ್ಕೂಟ ವ್ಯವಸ್ಥೆಯಲ್ಲಿನ ಅಂತರಗಳ ಸಮತೋಲನಾ ಆಯಾಮಗಳು<br>ಪ್ರೊ. ಗೋಪಾಲ್ ಗುರು<br>ಪ್ರೊ. ಸುಧೀರ್ ಕೃಷ್ಣಸ್ವಾಮಿ<br>ಪ್ರೊ. ತರುನಭ್ ಖೈತಾನ್<br>ಪ್ರೊ. ನಂದಿನಿ ಸುಂದರ್ |
| 3:30 pm to 4:30 pm | ಸಮಾನತೆ ಮತ್ತು ಸಮತೆಯನ್ನು ಖಾತ್ರಿಪಡಿಸುವುದು<br>ಪ್ರೊ.ಸುಖದೇವ್ ತೊರಟ್<br>ಮಿಸ್. ಜಯನಾ ಕೊಥಾರಿ<br>ಪ್ರೊ. ಸಂಜಯ್ ಜೈನ್<br>ಪ್ರೊ. ರೋಚನಾ ಬಾಜ್ಪೈ<br>ಪ್ರೊ. ಮೀನಾ ಧಂಡಾ | ಮೂಲಭೂತ ಹಕ್ಕುಗಳು, ನಿರ್ದೇಶಿಕ ತತ್ವಗಳು ಮತ್ತು ಪೌರತ್ವ<br>ಶ್ರೀಮತಿ. ಮೇಧಾ ಪಾಟ್ಕರ್<br>ಶ್ರೀ ಸಿದ್ಧಾರ್ಥ ವರದರಾಜನ್<br>ಶ್ರೀ ಸಂಜಯ್ ಆರ್ ಹೆಗ್ಡೆ<br>ಪ್ರೊ. ಸಿ. ಬಸವರಾಜು | ಕರ್ನಾಟಕ SCSP ಮತ್ತು TSP ಕಾಯಿದೆ<br>ಡಾ. ಇ ವೆಂಕಟಯ್ಯ<br>ಶ್ರೀ ಎನ್ ಸಿ ಮುನಿಯಪ್ಪ<br>ಡಾ. ಕೆ.ಎ. ಮೆಟ್ರಿ<br>ಪ್ರೊ. ಕೃಷ್ಣ ರಾಜ್ | ಒಕ್ಕೂಟ ವ್ಯವಸ್ಥೆಯಲ್ಲಿ ಭಾಷಾ ಆಯಾಮಗಳು<br>ಡಾ. ವಿ ಭಾಗ್ಯಲಕ್ಷ್ಮಿ<br>ಡಾ. ಗಣೇಶ್ ನಾರಾಯಣ್ ದಾಸ್ ದೇವಿ<br>ಶ್ರೀ ಪಿ ವಿಲ್ಸನ್<br>ಶ್ರೀ ಕೆ ಪಿ ಲಕ್ಷ್ಮಣ್<br>ಶ್ರೀಮತಿ ಮಂಜುಳಾ ಮಾಳ್ಗಿ<br>ಶ್ರೀಮತಿ ಪಲ್ಲವಿ ಜಿ |
| 5:00 pm to 6:00pm | ಭಾರತದ ಒಕ್ಕೂಟ ವ್ಯವಸ್ಥೆಯನ್ನು ಪುನರುಚ್ಚರಿಸುವುದು<br>ಡಾ. ಗೋವಿಂದ ರಾವ್<br>ಪ್ರೊ. ಖಾಮ್ ಖಾನ್ ಸುವಾನ್ ಹೌಸಿಂಗ್<br>ಪ್ರೊ. ಅಶುತೋಷ್ ವರ್ಷ್ಣೆ<br>ಶ್ರೀಮತಿ. ಯಾಮಿನಿ ಅಯ್ಯರ್ | ಸಾಮಾಜಿಕ ಮತ್ತು ಆರ್ಥಿಕ ನ್ಯಾಯ<br>ಶ್ರೀ ಸಲ್ಮಾನ್ ಖುರ್ಶಿದ್<br>ಪ್ರೊ. ಮಾದೇಶ್ವರನ್<br>ಶ್ರೀ. ನಿಖಿಲ್ ಡೇ<br>ಶ್ರೀಮತಿ ಬೀನಾ ಪಲ್ಲಿಕಲ್<br>ಶ್ರೀಮತಿ. ಕಾಂಚ ಇಳೆಯ್ಯ ಶೆಫರ್ಡ್ | ಕರ್ನಾಟಕ ಸರ್ಕಾರದ ಗ್ಯಾರಂಟಿಗಳು ಮತ್ತು ಸಾರ್ವತ್ರಿಕ ಮೂಲ ಆದಾಯ<br>ಶ್ರೀ ಸಿ.ಎಸ್ ದ್ವಾರಕಾನಾಥ್<br>ಶ್ರೀ ಎಚ್ ಎಮ್ ರುದ್ರಸ್ವಾಮಿ<br>ಪ್ರೊ. ಎ ನಾರಾಯಣ<br>ಪ್ರೊ. ಮಲ್ಲಿಕಾ ಘಂಟಿ<br>ಡಾ. ಸಪ್ನ ಎಸ್ | ಮುಖ್ಯವಾಹಿನಿಯೆಡೆಗೆ "ಸಬಾಲ್ಟರ್ನ್ "ಸಂಸ್ಕೃತಿಯ ನೆಲೆಗಳು<br>ಶ್ರೀ ಇಂದೂಧರ ಹೊನ್ನಾಪುರ<br>ಡಾ. ಅಶ್ವಿನಿ ಕೆ ಪಿ<br>ಡಾ.ಸೂರಜ್.ಮಿಲಿಂದ್ ಯಂಗ್ಡಿ<br>ಪ್ರೊ. ಚಿದಾನಂದ ರೆಡ್ಡಿ ಎಸ್ ಪಾಟಿಲ್<br>ಶ್ರೀ ರೂಮಿ ಹರೀಶ್<br>ಶ್ರೀ ಅನಂತ ನಾಯಕ್ ಎನ್ |

## 25th February, 2024

| | | | | |
|---|---|---|---|---|
| 9:30 am to 11:00 am | ಪ್ರಜಾಪ್ರಭುತ್ವಕ್ಕೆ ಸಾಂಸ್ಥಿಕ ಸುರಕ್ಷತೆಗಳು<br>ಡಾ. ಎಸ್ ವೈ ಖುರೈಶಿ<br>ಪ್ರೊ. ಅರುಣ್ ತಿರುವೆಂಗದಮ್<br>ಡಾ. ಅಪರ್ಣಾಚಂದ್ರ<br>ಡಾ. ಎಫ್ ಶ್ರೀಧರನ್ | ಆದಾಯದ ಅಸಮಾನತೆ ಮತ್ತು ಸಾರ್ವತ್ರಿಕ ಮೂಲಆದಾಯ<br>ಪ್ರೊ. ಸುಖದೇವ್ ತೊರಟ್<br>ಪ್ರೊ. ಸಂತೋಷ್ ಮೆಹ್ರೋತ್ರ<br>ಶ್ರೀ. ಹರೀಶ್ ಮಾಂದೇರ್<br>ಪ್ರೊ. ಕೃಷ್ಣ ರಾಜ್<br>ಪ್ರೊ. ಬಾಬು ಮ್ಯಾಥ್ಯು | ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು<br>ಡಾ. ವೀರಪ್ಪ ಮೊಯಿಲಿ<br>ಶ್ರೀ. ಕೆ. ಎನ್ ಲಿಂಗಪ್ಪ<br>ಪ್ರೊ. ಮುಜಾ..ಫರ್ಅ ಆಸ್ಸಾದಿ<br>ಶ್ರೀದಿನೇಶ್ ಅಮೀನ್‌ಮಟ್ಟು<br>ಶ್ರೀಮತಿ. ದು. ಸರಸ್ವತಿ | ಪ್ರಜಾಪ್ರಭುತ್ವ ಮತ್ತು ಮತದಾನ<br>ಶ್ರೀ ಪ್ರಶಾಂತ್ ಭೂಷಣ್<br>ಶ್ರೀ ದೇವಸಹಾಯಮ್ ಎಮ್ ಜಿ<br>ಪ್ರೊ. ಅಜಯ್ ಗುಡವರ್ತಿ<br>ಡಾ. ಅರುಣ್ ಜೋಳದ ಕೂಡ್ಲಿಗಿ<br>ಶ್ರೀ ಬಿ ಗೋಪಾಲ್<br>ಶ್ರೀಮತಿ ಮಂಜುಳ ತೇಲ್ಗಡೆ |
| 11:30 am to 1:00 pm | ಸಾಂವಿಧಾನಿಕ ಸಂಸ್ಕೃತಿ ಮತ್ತು ಪ್ರಜ್ಞೆಯನ್ನುರೂಪಿಸುವಿಕೆ.<br>ಡಾ. ಜಾನ್ ಬ್ರಿಟ್ಟಾಸ್<br>ಪ್ರೊ. ಶೃತಿ ಕಪಿಲಾ<br>ಪ್ರೊ. ಜಿ. ಮೋಹನ್ ಗೋಪಾಲ್<br>ಶ್ರೀ. ಅನುರಾಗ್ ಭಾಸ್ಕರ್<br>ಶ್ರೀ. ಬೆಜವಾಡ ವಿಲ್ಸನ್ | ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ಸಕಾರಾತ್ಮಕ ಕ್ರಮಗಳು<br>ಶ್ರೀ. ಕೆ ರಾಜು<br>ಶ್ರೀ. ಜಿಗ್ನೇಶ್ ಮೇವಾನಿ<br>ಡಾ. ಅಮಿತ್ ತೋರಾಟ್<br>ಮಿಸ್. ಸೀಮಾ ಚಿಸ್ಟಿ<br>ಪ್ರೊ. ವಿನೋಜ್ ಅಬ್ರಹಾಮ್ | ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯದ ಹೆಜ್ಜೆಗುರುತುಗಳು<br>ಪ್ರೊ. ಎಸ್. ಜಿ ಸಿದ್ದರಾಮಯ್ಯ<br>ಡಾ. ಶಶಿಕಾಂತ್ ಆರ್ ಪಟ್ಟನ್<br>ಪ್ರೊ. ಎಲ್ ಎನ್ ಮುಕುಂದರಾಜ್<br>ಪ್ರೊ.. ಪುರುಶೋತ್ತಮ ಬಿಳಿಮಲೆ<br>ಪ್ರೊ. ಚೆನ್ನಸ್ವಾಮಿ ಸೋಸಲೆ | ಯುವಜನತೆ, ಉದ್ಯೋಗ ಮತ್ತು ರಾಷ್ಟ್ರ ನಿರ್ಮಾಣದ ಆಯಾಮಗಳು<br>ಡಾ.ಪುಷ್ಪರಾಜ್ ದೇಶ್ ಪಾಂಡೆ<br>ಶ್ರೀ ಶಶಿಕಾಂತ್ ಸೆಂಥಿಲ್<br>ಮಿಸ್.ರುಚಿರ ಚತುರ್ವೇದಿ<br>ಪ್ರೊ. ನವಲ್ ಕಿಶೋರ್<br>ಡಾ. ನೀರ್ ತುಕ್<br>ಶ್ರೀ ವಿಕಾಸ್ ಟಿ ಮೌರ್ಯ |

# ಸಾಂಸ್ಕೃತಿಕ ಪ್ರದರ್ಶನಗಳು (ಎಕ್ಸ್ಪೋ)

ಏಕತಾ ಎಕ್ಸ್ಪೋ ಆಯೋಜನೆಯ ನೇತೃತ್ವವನ್ನು ಕರ್ನಾಟಕ ವಸತಿ ಸಂಸ್ಥೆ ಸೊಸೈಟಿಯು ವಹಿಸಿಕೊಂಡಿದೆ. ಸಂಸ್ಥೆಯು 6ರಿಂದ 12ನೇ ತರಗತಿಯ ಚಾಣಾಕ್ಷ ವಿದ್ಯಾರ್ಥಿಗಳಿಗೆ ವಾರ್ಷಿಕ ವಸ್ತು ಪ್ರದರ್ಶನಗಳನ್ನು ಆಯೋಜಿಸಿ ಅವರ ಯೋಚನಾ ಲಹರಿಗೆ ಸಾಣೆ ಹಿಡಿಯುತ್ತಿದೆ. ವೈಜ್ಞಾನಿಕ ಮನೋಭಾವ, ಪ್ರಜಾಪ್ರಭುತ್ವದ ಹಾಗೂ ಮೌಲ್ಯಗಳ ಅಳವಡಿಕೆಯು ಕಾರ್ಯಕ್ರಮದ ಉದ್ದೇಶವಾಗಿದೆ. ರಾಜ್ಯಾದ್ಯಂತ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ಸುಮಾರು 2 ಲಕ್ಷ ವಿದ್ಯಾರ್ಥಿಗಳನ್ನು ಕಾರ್ಯಕ್ರಮವು ತಲುಪಲಿದೆ.

ಪ್ರಸಕ್ತ ವರ್ಷದ ವಸ್ತು ಪ್ರದರ್ಶನವು ಸಂವಿಧಾನ, ಪ್ರಜಾಪ್ರಭುತ್ವದ ಆಶಯಗಳು ಸೇರಿ ರಾಜ್ಯಾದ್ಯಂತ ವಿದ್ಯಾರ್ಥಿಗಳಿಂದಲೇ 100ಕ್ಕೂ ಅಧಿಕ ವಿಷಯಗಳ ಮೇಲೆ ಸಿದ್ಧವಾದ ಪ್ರಾಜೆಕ್ಟ್‌ಗಳನ್ನು ಒಳಗೊಂಡಿದೆ. ಈ ಕಾರ್ಯಕ್ರಮವು ವಿದ್ಯಾರ್ಥಿಗಳ ಹತ್ತಾರು ಪ್ರತಿಭೆಗಳಿಗೆ ವೇದಿಕೆಯಾಗುವ ಜತೆಗೆ ಅವರಲ್ಲಿ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯದ ತತ್ವಗಳು, ದೃಢ ನಿಶ್ಚಯ, ಕಾರ್ಯಚಟುವಟಿಕೆಗಳು, ವಿವಿಧತೆಯಲ್ಲಿ ಏಕತೆ, ಸಮಾನತೆ ಹಾಗೂ ಭ್ರಾತೃತ್ವದ ಮನೋಭಾವವನ್ನು ಜಾಗೃತಿಗೊಳಿಸಲಿದೆ.

ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರನ್ನು ಸ್ಮರಿಸುವುದು ಕಾರ್ಯಕ್ರಮದ ಪ್ರಮುಖ ವಿಷಯವಾಗಿತ್ತು. ಹಾಗೆಯೇ, ಅವರ ದೂರದೃಷ್ಟಿ ಹಾಗೂ ಸಮಾಜದ ಒಳಗೊಳ್ಳುವಿಕೆಯನ್ನು ಅರಿತುಕೊಳ್ಳಲು ನೆರವಾಗಿದೆ. ವಿವಿಧತೆಯಲ್ಲಿ ಏಕತೆ, ಸಮಾನತೆ ಹಾಗೂ ಭ್ರಾತೃತ್ವದ ಮೂಲಕ ಒಗ್ಗೂಡಿ ದೇಶ ನಿರ್ಮಿಸಲು ಪ್ರೇರೇಪಣೆ ನೀಡಲಾಗಿದೆ.





# ಸಂವಿಧಾನ ಜಾಗೃತಿಯ ಬೃಹತ್ ಕಾರ್ಯಕ್ರಮ

ಮನೆ ಮನೆಗಳಿಗೂ ಸಂವಿಧಾನದ ಆಶಯದ ಅರಿವು ನೀಡುವ ಈ ಜಾಗೃತಿ ಸಮಾವೇಶದಲ್ಲಿ ರಾಜ್ಯದ ಜಿಲ್ಲೆ ತಾಲೋಕುಗಳು ಮತ್ತು ಪ್ರತಿಯೊಂದು ಗ್ರಾಮ ಪಂಚಾಯಿತಿಯ ಜನಪ್ರತಿನಿಧಿಗಳಿಂದ ಹಿಡಿದು ಕರ್ನಾಟಕದ ಎಲ್ಲಾ ಸಮುದಾಯಗಳು ಲಕ್ಷಾಂತರ ಜನರು ಸಂವಿಧಾನ ಜಾಗೃತಿಯ ಬೃಹತ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. 2024ರ ಫೆಬ್ರವರಿ 25 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೃಹತ್ ಕಾರ್ಯಕ್ರಮದಲ್ಲಿ ಅಂತಿಮವಾಗಿ ಈ ಜಾಗೃತಿ ಜಾಥಾದ ಮೂಲಕ ಸಾಮೂಹಿಕವಾಗಿ ಭಾಗವಹಿಸಲಿದ್ದು ಸರ್ವ ಜನರಿಗೂ ಸಂವಿಧಾನ ನೀಡಿರುವ ಹಕ್ಕುಗಳು, ಕರ್ತವ್ಯಗಳು ಹಾಗೂ ತತ್ವಗಳ ಬಗ್ಗೆ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಗುರಿಯಾಗಿದೆ. ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯಲು ನಾಗರಿಕ ಸಮಾಜದ ಸಹಭಾಗಿತ್ವ ಎಷ್ಟು ಮುಖ್ಯವಾಗಿದೆ ಎಂಬುದನ್ನು ಕೂಡ ಜನರಿಗೆ ಸಾರಲಾಗುತ್ತದೆ. ಈ ಕಾರ್ಯಕ್ರಮದ ಅಂತಿಮ ರೂಪದಲ್ಲಿ ಬೆಂಗಳೂರಿನ ಅರಮನೆ ಮೈದಾನವು ಲಕ್ಷ ಲಕ್ಷ ಜನರು ಭಾಗವಹಿಸುವುದರ ಮೂಲಕ ಹಳ್ಳಿಯಿಂದ ಹಿಡಿದು ರಾಷ್ಟ್ರದ ಎಲ್ಲ ಜನರೂ ಭಾಗವಹಿಸಿ ರಾಷ್ಟ್ರದ ಸಂವಿಧಾನದ ಹಬ್ಬವನ್ನು ಸಮಸ್ತರ ಪಾಲ್ಗೊಳ್ಳುವುದರ ಮೂಲಕ ರಾಷ್ಟ್ರದ ಸಮಗ್ರತೆಯನ್ನು ಸಾರುವ ಬೃಹತ್ ಸಮಾವೇಷವನ್ನು ಸಂಘಟಿಸಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರವು ಈ ಬೃಹತ್ ಸಮಾವೇಶವನ್ನು ನಡೆಸುವು ಮೂಲಕ ಭಾರತ ಎಂಬುದು ಬಹುತ್ವದ ಪ್ರತೀಕ. ಸಂವಾಧನದ ಮೂಲಕ ರಾಷ್ಟ್ರ ನಿರ್ಮಾಣ ಎಂಬುದನ್ನು ಸಾರಿ ಹೇಳುತ್ತಿದೆ.

‘ಸಮಸ್ತ ಭಾರತೀಯರಿಗೂ ಸಂವಿಧಾನವೇ ಧರ್ಮ.. ಅದೊಂದೇ ಧರ್ಮ’ ಎಂಬುದನ್ನು ಸಾರುವ ಈ ರಾಷ್ಟ್ರ ಐಕ್ಯತಾ ಸಮಾವೇಶವು ಬೆಂಗಳೂರಿನಲ್ಲಿ ನಡೆಯಲಿದ್ದು ಇಂದು ಭಾರತೀಯರಾದ ನಾವೆಲ್ಲರೂ ಸಂವಿಧಾನವನ್ನು ಜಾರಿಗೊಳಿಸಿ ೭೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದೇವೆ. ಬೃಹತ್ ಪ್ರಜಾಪ್ರಭುತ್ವ ದೇಶದ ಸಂವಿಧಾನದ ಆಶಯಗಳನ್ನು ಅನುಷ್ಠಾನಗೊಳಿಸುತ್ತಿರುವುದು ಮಾತ್ರವಲ್ಲದೆ ಕರ್ನಾಟಕದಲ್ಲಿ ಕಳೆದ ೭೫ ವರ್ಷಗಳಲ್ಲಿ ಚಾರಿತ್ರಿಕವಾಗಿ ಬೆಳೆದಿರುವ ವಿದ್ಯಮಾನಗಳನ್ನು ಕುರಿತು ಪುನರ್ ಅವಲೋಕನ ನಡೆಸುವ ಸಲುವಾಗಿ ರಾಷ್ಟ್ರಮಟ್ಟದ ಐಕ್ಯತಾ ಸಮಾವೇಶವನ್ನು ಆಯೋಜಿಸಲಾಗಿದೆ.

**ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಲು ಕೋಡ್ ಸ್ಕ್ಯಾನ್ ಮಾಡಿ**

**"We, each one of us, in this office / Institution, hereby pledge that we will abide by the preamble in our work and life with utmost sincerity"**

# THE CONSTITUTION OF INDIA

## PREAMBLE

WE, THE PEOPLE OF INDIA,
having solemnly resolved to constitute India into a
SOVEREIGN SOCIALIST
SECULAR DEMOCRATIC REPUBLIC
and to secure to all its citizens;
JUSTICE, social, economic and political;
LIBERTY of thought, expression,
belief, faith and worship;
EQUALITY of status and of opportunity;
and to promote among them all
FRATERNITY assuring the dignity of the
individual and the unity and
integrity of the Nation;
IN OUR CONSTITUENT ASSEMBLY
this twenty-sixth day of November, 1949, do
HEREBY ADOPT, ENACT AND GIVE TO
OURSELVES THIS CONSTITUTION.



ಸಂವಿಧಾನ ಮತ್ತು
ರಾಷ್ಟ್ರೀಯ ಏಕತೆ
ಸಮಾವೇಶ '24


@ConstitutionGoK

Constitution Awareness Jatha

Constitution GoK

https://t.me/ConstitutionGOK

constitutionconvention2024@gmail.com

Constitutional Jatha Helpline: +91 89513 05414